# ಶಾಲಾ ಹುಡುಗಿಯಾದ ನಿಶಾ

'ಅಂಶು' ಸಿನಿಮಾ ಮೂಲಕ ಕಿರುತೆರೆಯಿಂದ ಹಿರಿತೆರೆಗೆ ಪದಾರ್ಪಣೆ ಮಾಡಿದ್ದ ನಟಿ ನಿಶಾ ರವಿಕೃಷ್ಣನ್, ಧಾರಾವಾಹಿ, ಸಿನಿಮಾಗಳೆರಡರಲ್ಲೂ ಬ್ಯುಸಿಯಾಗಿದ್ದಾರೆ.

ಸದ್ಯ ಅವರು ವಿನಯ್ ರಾಜ್‌ಕುಮಾರ್ ಅವರೊಂದಿಗೆ ಕಾಣಿಸಿಕೊಂಡಿರುವ 'ಅದೊಂದಿತ್ತು ಕಾಲ' ಸಿನಿಮಾ ತೆರೆಗೆ ಬರಲು ಸಿದ್ಧವಾಗಿದ್ದು, ಇದೇ ಆಗಸ್ಟ್ 29ಕ್ಕೆ ಬಿಡುಗಡೆಯಾಗುತ್ತಿದೆ.

ಸಿನಿಮಾದ 'ಮುಂಗಾರು ಮಳೆಯಲ್ಲಿ' ಹಾಡು ರಿಲೀಸ್ ಆಗಿದ್ದು, ಫೇಮಸ್ ಆಗಿದೆ. ಎರಡನೇ ಹಾಡು 'ಅರೆ ಅರೆ ಯಾರೊ ಇವಳು' ಕೂಡ ಈಚೆಗೆ ಬಿಡುಗಡೆಗೊಂಡಿದ್ದು, ಈ ಹಾಡಿನಲ್ಲಿ ನಿಶಾ ಹಾಗೂ ವಿನಯ್ ನಟಿಸಿದ್ದಾರೆ. 90ರ ದಶಕದ ಶಾಲಾ ದೃಶ್ಯದಲ್ಲಿ, ಸಮವಸ್ತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಹಾಡನ್ನು ಶಾಲಾ ಮಕ್ಕಳೇ ಬಿಡುಗಡೆಗೊಳಿಸಿದ್ದು ವಿಶೇಷ.

'ಈ ಹಾಡು ನನ್ನ ಹೃದಯಕ್ಕೆ ಹತ್ತಿರವಾಗಿದೆ. 16ರ ವಯಸ್ಸಿನಲ್ಲಿರುವಂತೆ ಕಾಣಿಸಿಕೊಳ್ಳುವುದು ಖುಷಿ ಕೊಟ್ಟರೂ ಸವಾಲು ಎಂದೂ ಅನಿಸಿತು' ಎಂದು ವಿನಯ್ ಹೇಳಿಕೊಂಡಿದ್ದಾರೆ.

'ಈ ಸಿನಿಮಾದಲ್ಲಿ ನನ್ನ ಪಾತ್ರ ಸಣ್ಣದಾದರೂ ಅದಕ್ಕೆ ತೂಕವಿದೆ ಎನಿಸಿತು. ವಿನಯ್ ರಾಜ್‌ಕುಮಾರ್ ಅವರೊಂದಿಗೆ ಕೆಲಸ ಮಾಡಿದ್ದು ಬಹಳ ಖುಷಿ ನೀಡಿದ ಸಂಗತಿ' ಎಂದು ಸಂತಸದಿಂದ ಹೇಳಿದ್ದಾರೆ ನಿಶಾ. ಸಿನಿಮಾದಲ್ಲಿ ವಿನಯ್, ಅದಿತಿ ಪ್ರಭುದೇವ, ಜಗ್ಗಪ್ಪ, ಅರುಣಾ ಬಾಲರಾಜ್, ನಿಶಾ ರವಿಕೃಷ್ಣನ್ ಇದ್ದು, ಅತಿಥಿ ಪಾತ್ರದಲ್ಲಿ ರವಿಚಂದ್ರನ್ ಕೂಡ ಇದ್ದಾರೆ. ■



# ಗೋಲ್ಡನ್ ಸಮಯ

ಕಳೆದ ವರ್ಷ ಬಿಡುಗಡೆ ಕಂಡ 'ಕೃಷ್ಣಂ ಪ್ರಣಯ ಸಖಿ' ಸಿನಿಮಾ, ಗೋಲ್ಡನ್ ಸ್ಟಾರ್ ಗಣೇಶ್‌ಗೆ ದೊಡ್ಡ ಯಶಸ್ಸನ್ನು ತಂದುಕೊಟ್ಟಿತ್ತು. ಅದರ ಬೆನ್ನಲ್ಲೇ ಒಂದಾದ ಮೇಲೊಂದರಂತೆ ಅವರ ಸಿನಿಮಾಗಳು ಘೋಷಣೆಯಾಗುತ್ತಿವೆ.

ಜುಲೈ 2ರಂದು ಗಣೇಶ್ ಹುಟ್ಟುಹಬ್ಬದ ಸಲುವಾಗಿ 'ಯುವರ್ಸ್ ಸಿನ್ಸಿಯರ್ಲಿ ರಾಮ್' ತಂಡ ಪೋಸ್ಟರ್ ಬಿಡುಗಡೆ ಮಾಡಿದ್ದು, ಗಣೇಶ್ ಭಜರಂಗಿ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ರಾಮನು ಸೈಕಲ್ ಮೇಲೆ ಕುಳಿತಿದ್ದು, ಸೈಕಲ್ ಹಿಂಭಾಗ ಹಿಮ್ಮುಖವಾಗಿ ಕುಳಿತ ಭಜರಂಗಿ ಅವತಾರದ ಗಣೇಶ್, ಪೋಸ್ಟ್‌ಕಾರ್ಡ್ ಹಿಡಿದು ಸಾಗುತ್ತಿರುವ ಪೋಸ್ಟರ್ ಹೊಸ ಕಥೆಯೊಂದನ್ನು ಹೇಳಲು ಹೊರಟಂತಿದೆ. ರಮೇಶ್ ಅರವಿಂದ್ ಹಾಗೂ ಗಣೇಶ್ ಕಾಂಬಿನೇಷನ್‌ನ ಈ ಸಿನಿಮಾ ಶೂಟಿಂಗ್ ಭರದಿಂದ ಸಾಗುತ್ತಿದೆ. ಈ ವರ್ಷಾಂತ್ಯಕ್ಕೆ ಸಿನಿಮಾವನ್ನು ತೆರೆಗೆ ತರುವ ಆಲೋಚನೆಯಿದೆ.

ಈ ಸಿನಿಮಾ ಜೊತೆಜೊತೆಗೆ 'ಪಿನಾಕ' ಸಿನಿಮಾ ಹೊಸ ಪೋಸ್ಟರ್ ಕೂಡ ಬಿಡುಗಡೆಗೊಂಡಿದ್ದು, ಅದರಲ್ಲಿಯೂ ಗಣೇಶ್ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾಗಳ ಸರದಿಯಲ್ಲಿಯೇ, 'ಜೇಮ್ಸ್' ಸಿನಿಮಾ ನಿರ್ದೇಶಕ ಚೇತನ್ ಕುಮಾರ್ ಗಣೇಶ್ ಜೊತೆ ಹೊಸ ಸಿನಿಮಾ ಘೋಷಿಸಿದ್ದಾರೆ. ಗಣೇಶ್ ಮ್ಯಾನರಿಸಂಗೆ ತಕ್ಕಂತೆ ಚೇತನ್ ಸಿನಿಮಾ ಮಾಡಲು ಹೊರಟಿದ್ದು, ರೊಮ್ಯಾಂಟಿಕ್ ಕಥೆಯ ಈ ಸಿನಿಮಾ ಮತ್ತೆ ಮುಂಗಾರು ಮಳೆ ಹುಡುಗನನ್ನು ತೆರೆ ಮೇಲೆ ತರಲಿದೆಯಾ ಎನ್ನುವ ಕುತೂಹಲ ಹುಟ್ಟುಹಾಕಿದೆ.

ಈ ಸಿನಿಮಾಗೂ ಮೊದಲು ನಿರ್ದೇಶಕ ಅರಸು ಅಂತಾರೆ ಸಿನಿಮಾವೊಂದನ್ನು ಘೋಷಿಸಿದ್ದರು. ಸಿನಿಮಾಗೆ ಈಚೆಗೆ 'ಡಿಜಾಂಗೊ ಕೃಷ್ಣಮೂರ್ತಿ' ಎಂದು ಶೀರ್ಷಿಕೆ ಇಡಲಾಗಿದೆ. ಕಳೆದ ವರ್ಷ ತಮಗೆ ಯಶಸ್ಸು ತಂದುಕೊಟ್ಟ 'ಕೃಷ್ಣಂ ಪ್ರಣಯ ಸಖಿ' ಸಿನಿಮಾ ನಿರ್ದೇಶಕ ಶ್ರೀನಿವಾಸ್‌ರಾಜು ಅವರೊಂದಿಗೆ ಮತ್ತೊಂದು ಸಿನಿಮಾ ಮಾಡಲು ಗಣೇಶ್ ಒಪ್ಪಿಗೆ ನೀಡಿದ್ದಾರೆ. ಒಟ್ಟಾರೆ ಸಾಲು ಸಾಲು ಸಿನಿಮಾಗಳು ಗೋಲ್ಡನ್ ಸ್ಟಾರ್ ಮುಂದಿದ್ದು, ಒಂದಾದ ಮೇಲೊಂದರಂತೆ ಸಿನಿಮಾಗಳನ್ನು ನೀಡಿ ಅಭಿಮಾನಿಗಳನ್ನು ರಂಜಿಸಲಿದ್ದಾರೆ. ■

